**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 227/2014**

| | | | |
|---|---|---|---|
| **ಹೆಸರು** | **:** | **ರಾಜೇಂದ್ರ** | **ಚಾ.ಸಾ. 1** |
| **ತಂದೆಯ ಹೆಸರು** | **:** | **ಶರಣಪ್ಪ** | **ಪ್ರಾ.ಸಾ. 2** |
| **ವಯಸ್ಸು** | **:** | **36 ವರ್ಷ** | **ದಿನಾಂಕ: 27-10-2025** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ದೇಗಲಮಡಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚಾಸಾ-4 ನನ್ನ ತಾಯಿ. ಚಾಸಾ-5 ಮತ್ತು 6ರವರು ನನಗೆ ಗೊತ್ತು. ಆರೋಪಿ ನನ್ನ ತಂದೆ.

2012 ರಲ್ಲಿ ನಮ್ಮ ಊರಿನ ಹೊಲದ ಹತ್ತಿರ ನನ್ನ ತಂದೆಯಾದ ಆರೋಪಿ ಹಣ ಮತ್ತು ಆಸ್ತಿಯ ವಿಷಯವಾಗಿ ಹೊಡೆದಿದ್ದರು. ಆಗ ನಾನು ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಆಗ ಅಲ್ಲಿದ್ದ ಕೂಲಿ ಜನರಾದ ಜಗದೇವಿ ಮತ್ತು ಗುಣವಂತರವರು ನನಗೆ ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಲುಬುರಗಿ ಬಸವೇಶ್ವರ ಗುಲಬರ್ಗಾಗೆ ಹೋಗಿರುತ್ತೇನೆ. ಆರೋಪಿ ಮಾಡಿದ ಹಲ್ಲೆ ಕಾರಣ ನನ್ನ ಮುಖಕ್ಕೆ ಗಾಯವಾಗಿರುತ್ತದೆ. ಹಲ್ಲೆ ಮಾಡಿದಾಗ ಸಮಯ ರಾತ್ರಿ 7 ರಿಂದ 8 ಗಂಟೆಯಾಗಿತ್ತು. ಹಲ್ಲೆ ಮಾಡುವುದನ್ನು ಬೇರೆ ಯಾರು ನೋಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ದೂರನ್ನು ನೀಡಿದ್ದೇನೆ. ಸದರಿ ದೂರಿನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆರೋಪಿ ನನಗೆ ಮಣ್ಣಿನ ಹೆಂಡಿಯಿಂದ ಹಲ್ಲೆ ಮಾಡಿರುತ್ತಾರೆ. ಈಗ 13 ವರ್ಷಗಳಿಂದ ನನ್ನ ತಂದೆ ಸಿಕ್ಕಿರುವುದಿಲ್ಲ ಮತ್ತು ಕಾಣೆಯಾಗಿರುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಮ್ಮ ಊರಿನ ಕ್ರಾಸ ಹತ್ತಿರ ಆರೋಪಿ ನನಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. ಆರೋಪಿ ನನಗೆ ಕೊಯಿತಾದಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. ಆಗ ಚಾಸಾ-5 ಮತ್ತು 6ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಪೋಲಿಸರು ಪಂಚನಾಮೆ ಮಾಡಲು ಬಂದಾಗ ಪೋಲಿಸರಿಗೆ ಸ್ಥಳವನ್ನು ತೋರಿಸಿದ್ದೇನೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ.

ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ